# ಶತಾಯುಷಿಗಳ ವೈವಾಹಿಕ ಜೀವನಕ್ಕೆ 80!





ಬ್ರಿಟನ್ ದೇಶದ ಜಾಕ್ ಬೇರ್ ಅವರಿಗೆ 102 ವರ್ಷ. ಅವರ ಪತ್ನಿ ಜೋನ್‌ಗೆ ನೂರು ವರ್ಷ. ಅವರಿಬ್ಬರ ವೈವಾಹಿಕ ಜೀವನಕ್ಕೀಗ 80ರ ಸಂಭ್ರಮ! 1939 ಆಗಸ್ಟ್ 3ರಂದು ಅವರಿಬ್ಬರೂ ಪರಸ್ಪರ ಪ್ರೀತಿಸಿ ವಿವಾಹವಾದರು. ಇವರು ಲಗ್ನವಾದ ಕೆಲವೇ ವಾರಗಳಲ್ಲಿ, ಎರಡನೇ ಜಾಗತಿಕ ಮಹಾಯುದ್ಧ ಆರಂಭವಾಯಿತು. ಆ ಯುದ್ಧದಲ್ಲಿ ಜಾಕ್ ಬೇರ್ ಕೂಡ ಭಾಗವಹಿಸಿದ್ದರು. ಕೋಟ್ಯಂತರ ಜನರು ಆ ಯುದ್ಧದಲ್ಲಿ ಪ್ರಾಣ ಕಳೆದುಕೊಂಡರು. ಅದು ಜಗತ್ತು ಈವರೆಗೆ ಕಂಡ ಅತ್ಯಂತ ಭೀಕರ ಯುದ್ಧ. ಅಂಥ ಭಯಾನಕ ಯುದ್ಧದಲ್ಲಿ ಭಾಗವಹಿಸಿ, ಉಳಿದು ಬಂದದ್ದಲ್ಲದೇ, ಈಗ 102 ವರ್ಷಗಳನ್ನು ಪೂರೈಸಿ, 80 ವರ್ಷಗಳ ವೈವಾಹಿಕ ಜೀವನದ ಸಂಭ್ರಮದಲ್ಲಿ, ಸತಿ ಜೋನ್‌ಳೊಂದಿಗೆ ನಗುತ್ತಿರುವ ಜಾಕ್ ನಿಜಕ್ಕೂ ಸುದೈವಿ!

ಅವರ ಸುದೀರ್ಘ ವೈವಾಹಿಕ ಜೀವನದ ಗುಟ್ಟೇನು ಗೊತ್ತೇ? ಯುದ್ಧದಿಂದ ಮರಳಿದ ಮೇಲೆ ಜಾಕ್ ಮತ್ತು ಜೋನ್ ಒಂದು ರಾತ್ರಿಯೂ ಬೇರೆ ಬೇರೆಯಾಗಿ ಮಲಗಿಲ್ಲವಂತೆ. ಮುನಿಸಿಕೊಂಡು, ಮುಖ ತಿರುಗಿಸಿಕೊಂಡು, ಸಿಟ್ಟಿನಿಂದ ದುಮುದುಮು ಎನ್ನುತ್ತ ಮಲಗಿಕೊಂಡ ರಾತ್ರಿಗಳೇ ಇಲ್ಲವಂತೆ. ಏನೇ ಸಮಸ್ಯೆಗಳಿದ್ದರೂ ಅವರು ಪರಸ್ಪರ ಮಾತನಾಡಿಕೊಂಡು ಬಗೆಹರಿಸಿಕೊಳ್ಳುತ್ತಾರಂತೆ. ಈಗ ಈ ಜೋಡಿ ಬ್ರಿಟನ್ನಿನಲ್ಲಿರುವ ಅತ್ಯಂತ ಹಿರಿಯ ಜೋಡಿ ಎಂಬ ಕೀರ್ತಿಗೂ ಭಾಜನವಾಗಿದೆ.

ಈ ಹಿರಿಯ ಜೋಡಿಗೆ ಬಹಳ ದೊಡ್ಡ ಪರಿವಾರವೇನಿಲ್ಲ. ಒಬ್ಬಳೇ ಮಗಳು. ಅವಳಿಗೂ 75 ವರ್ಷ. ಅವಳೂ ಈಗ 52 ವರ್ಷಗಳ ವೈವಾಹಿಕ ಜೀವನದಲ್ಲಿ ಎರಡು ಹೆಣ್ಣು ಮಕ್ಕಳನ್ನು ಪಡೆದಿದ್ದಾಳೆ. ಅವಳಿಗೂ ನಾಲ್ಕು ಜನ ಮೊಮ್ಮಕ್ಕಳಿದ್ದಾರೆ. ಎಲ್ಲರೂ ಪರಸ್ಪರರ ಅಭಿಪ್ರಾಯ ಭಿನ್ನಾಭಿಪ್ರಾಯಗಳನ್ನು ಕೇಳುತ್ತಾರೆ, ಸ್ಪಂದಿಸುತ್ತಾರೆ. ಜಾಕ್ ಪರಿವಾರ ಸಣ್ಣದಾದರೂ, ಸುಂದರವಾದ ಹಾಗೂ ಸುಖಿ ಪರಿವಾರ.

■ ಸುಭಾಸ ಯಾದವಾಡ